# ಬುವಿಯಿಂದ ಬಾನಂಗಳಕ್ಕೆ ಮ್ಯಾರಥಾನ್ ಧ್ರುವತಾರೆ

**ಕೆನ್ಯಾದ ಕೆಲ್ವಿನ್ ಕಿಪ್ಟಮ್ ಮ್ಯಾರಥಾನ್ ಲೋಕದ ವಿಶ್ವಪ್ರಸಿದ್ಧ ಓಟಗಾರ. ಈ ಅಪ್ರತಿಮ ಓಟಗಾರನ ನಾಗಾಲೋಟ ಇದ್ದಕ್ಕಿದ್ದಂತೆ ಕೊನೆಗೊಂಡಿದೆ.**

■ ನಾಗೇಶ ಶೆಣೈ

ಅಲ್ಪಾವಧಿಯಲ್ಲೇ ಜಗದ ಗಮನಸೆಳೆದು ಸಾರ್ವಕಾಲಿಕ ಶ್ರೇಷ್ಠ ಮ್ಯಾರಥಾನ್ ಓಟಗಾರನಾಗುವ ಹಾದಿಯಲ್ಲಿದ್ದ ಕೆನ್ಯಾದ ಕೆಲ್ವಿನ್ ಕಿಪ್ಟಮ್ ಇತ್ತೀಚೆಗೆ ಕಾರು ಅಪಘಾತದಲ್ಲಿ ದಾರುಣವಾಗಿ ಸಾವಿಗೀಡಾಗಿದ್ದಾರೆ. ಈ ಓಟದಲ್ಲಿ ಹಿರಿದಾದ ಸಾಧನೆಯ ಕನಸು ಕಂಡಿದ್ದ 24ರ ಹರೆಯದ ಕಿಪ್ಟಮ್ (1999–2024) ಅವರ ಅಕಾಲಿಕ ಸಾವಿಗೆ ಅಥ್ಲೆಟಿಕ್ ಜಗತ್ತು ಮರುಗಿದೆ. ಅವರ ಸಾವು ಅಥ್ಲೆಟಿಕ್ಸ್‌ಗೆ ಬಲುದೊಡ್ಡ ನಷ್ಟ.

ದಕ್ಷಿಣ ಆಫ್ರಿಕಾ ಖಂಡದ ಕೆನ್ಯಾ, ಇಥಿಯೋಪಿಯಾ, ಯುಗಾಂಡಾ, ತಾಂಜಾನಿಯಾ ಮೊದಲಾದ ದೇಶಗಳು ದೂರ ಅಂತರದ ಓಟದಲ್ಲಿ ವಿಶ್ವಕ್ಕೆ ಪ್ರಸಿದ್ಧ ಓಟಗಾರರನ್ನು ನೀಡಿವೆ. ಅದರಲ್ಲೂ ಕೆನ್ಯಾದ ಕೊಡುಗೆ ಅಪಾರ. ಕೆನ್ಯಾದ ಇಲ್ಯುಡ್ ಕಿಪ್ಚೊಗೆ ವಿಶ್ವದ ಅಗ್ರಮಾನ್ಯ ಮ್ಯಾರಥಾನ್ ಓಟಗಾರನಾಗಿ ಕೆಲವು ವರ್ಷಗಳಿಂದ ಆಧಿಪತ್ಯ ಸ್ಥಾಪಿಸಿದ್ದರು. 34 ವರ್ಷದ ಕಿಪ್ಚೋಗೆ ಅವರ ದಾಖಲೆಯನ್ನು ತಮ್ಮ ಮೂರನೇ ರೇಸ್‌ನಲ್ಲೇ ಮುರಿದವರು ಕಿಪ್ಟಮ್. ಮುಂದಿನ ಪ್ಯಾರಿಸ್ ಒಲಿಂಪಿಕ್ಸ್ ಸೇರಿ ಹಲವು ಮ್ಯಾರಥಾನ್ ಸ್ಪರ್ಧೆಗಳಲ್ಲಿ ಇವರಿಬ್ಬರ ನಡುವೆ ಪೈಪೋಟಿ ಏರ್ಪಡುವ ನಿರೀಕ್ಷೆಗಳಿದ್ದವು. ಏಪ್ರಿಲ್‌ನಲ್ಲಿ ನಡೆಯಲಿರುವ ರೋಟರ್‌ಡ್ಯಾಮ್ ಮ್ಯಾರಥಾನ್‌ಗೆ ಸಿದ್ಧತೆ ನಡೆಸುತ್ತಿದ್ದ ಕಿಪ್ಟಮ್ ಒಲಿಂಪಿಕ್ಸ್‌ನಲ್ಲಿ ಚಿನ್ನ ಗೆಲ್ಲುವ ಬಯಕೆಯನ್ನೂ ಕೆಲದಿನಗಳ ಹಿಂದೆ ಬಹಿರಂಗಪಡಿಸಿದ್ದರು.

ಅವರು ಅಲ್ಡೊರೆಟ್‌ಗೆ ಕಾರು ಚಲಾಯಿಸುತ್ತಿದ್ದ ವೇಳೆ ಕಪ್ತಾಗಟ್ ಎಂಬಲ್ಲಿ ವಾಹನ ರಸ್ತೆಯಿಂದ




**ದಾರುಣ ಅಂತ್ಯ ಕಂಡ ಕೆಲ್ವಿನ್ ಕಿಪ್ಟಮ್ 'ಓಟ'**